# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**ಟಮಕ, ಕೋಲಾರ-563 103**

ಸಂಖ್ಯೆ: ಬೆಂ.ಉ.ವಿ.ವಿ.ಕು.ಕಾ/ಚುನಾವಣಾ/1196/2023-24 ದಿನಾಂಕ: 04.09.2023

**<u>ಸುತ್ತೋಲೆ</u>**

**ವಿಷಯ: ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಬಗ್ಗೆ**
**ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಇಎಲ್ ಎನ್:ಸಿಆರ್:08:2023-24, ದಿನಾಂಕ:07/08/2023**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವ ಕೋಲಾರ ಜಿಲ್ಲಾ ಸಂಯೋಜಿತ ಕಾಲೇಜುಗಳ ತಮ್ಮ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸಕ್ರಿಯವಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕಿದೆ ಅದಕ್ಕಾಗಿ, ಮಾನ್ಯ ಜಿಲ್ಲಾಧಿಕಾರಿಗಳ ಪತ್ರವನ್ನು ಗಮನಿಸುವುದು ಸೂಕ್ತ ಅದರ ಮೇರೆಗೆ ನಾಲ್ಕು ಅರ್ಹತಾ ದಿನಗಳಲ್ಲಿ '1ನೇ ಜನವರಿ, 1ನೇ ಏಪ್ರಿಲ್, 1ನೇ ಜುಲೈ ಹಾಗೂ 1ನೇ ಅಕ್ಟೋಬರ್' ನಲ್ಲಿ ನಡೆಸುವುದು. ಅಂದರೆ 17+ ವರ್ಷ ತುಂಬಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರ ವಿವರಗಳು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು. ಈ ಕುರಿತು ಅರಿವು ಮೂಡಿಸಿ, 'ವೋಟರ್ ಹೆಲ್ಪ್ ಲೈನ್ ಆಫ್' ಮೂಲಕ ಸೇರ್ಪಡೆಯಾಗಿ ಪ್ರೇರೆಪಿಸಬೇಕು. ಇಂತಹ ಕಾರ್ಯಕ್ರಮಗಳನ್ನು ನಡೆಸಿ, ಹೊಸ ಮತದಾರರ ಪಟ್ಟಿಯನ್ನು ತಯಾರಿಸಿ, ಜರೂರಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಹಾಗೆಯೇ, ವಿದ್ಯಾರ್ಥಿ/ವಿದ್ಯಾರ್ಥಿನಿಯರು ಭಾರತ ಚುನಾವಣಾ ಆಯೋಗ ನಿರ್ದೇಶಿಸಿರುವಂತೆ ಮನೆ ಮನೆ ಭೇಟಿ ನೀಡಿ ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣ ಪಟ್ಟಿಯನ್ನು ತಯಾರಿಸಲು ನೆರವಾಗುವಂತೆ ಸೂಚಿಸಬೇಕು. ಇದನ್ನು ಎಲ್ಲಾ ಮತಗಟ್ಟೆ ಅಧಿಕಾರಿಗಳು ಮನೆ ಮನೆ ಭೇಟಿ ನೀಡುವಾಗ ನೀಡಬೇಕಾಗುತ್ತದೆ. ಅದಕ್ಕಾಗಿ ಬಿ.ಎಲ್.ಒ ರವರೊಡನೆ ಸಹಕರಿಸಿ ಮತ್ತು ಎಲ್ಲಾ ಮತಗಟ್ಟೆ ಹಂತದ ವಿವರಗಳನ್ನು ಈ ಕೆಳಗಿನ ವೆಬ್-ಸೈಟ್‌ನಲ್ಲಿ ಪ್ರಕಟಿಸುವಂತೆ ಅರಿವು ನೀಡತಕ್ಕದ್ದು. **<u>https://kolar.nic.in/en/election/</u>**

4/9/23
**ಕುಲಸಚಿವರು**

**ಅಡಕ:** ಮಾನ್ಯ ಜಿಲ್ಲಾಧಿಕಾರಿಗಳ ಪತ್ರ.

**ಕುಲಸಚಿವರು**
**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**
**ಟಮಕ, ಕೋಲಾರ, ಕರ್ನಾಟಕ-563 103.**

**ರವರಿಗೆ,**

**ಪ್ರಾಂಶುಪಾಲರು,**

**ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕೋಲಾರ ಜಿಲ್ಲೆ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳು**

**ಪ್ರತಿಗಳು:**

1. ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಭವನ, ಕುಂಬಾರಹಳ್ಳಿ, ರಾಷ್ಟ್ರೀಯ ಹೆದ್ದಾರಿ,75, ಟಮಕ, ಕೋಲಾರ-563 103
2. ಮಾನ್ಯ ಕುಲಪತಿಗಳ ಆಪ್ತ ಶಾಖೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ ಕೋಲಾರ
3. ಕಛೇರಿ ಪ್ರತಿ.

Scanned by CamScanner

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು
ಕೋಲಾರ ಜಿಲ್ಲೆ, ಕೋಲಾರ.
Deputy Commissioner & District Magistrate,
Kolar District, Kolar

ಕರ್ನಾಟಕ ಸರ್ಕಾರ
Government of Karnataka

ಜಿಲ್ಲಾಡಳಿತ ಭವನ,
ಕುಂಬಾರಹಳ್ಳಿ, ರಾಷ್ಟ್ರೀಯ ಹೆದ್ದಾರಿ - 75,
ಟಮಕ ಅಂಚೆ, ಕೋಲಾರ - 563 103.
Off : 08152-243666
Mob. : 94800 31010
e-mail : deo.kolar@gmail.com
dcoffice.klr@gmail.com

BENGALURU NORTH UNIVERSITY
1337
Date 10/8/23
TAMAKA, KOLAR

ಸಂ. ಇಎಲ್ಎನ್:ಸಿಆರ್:08:2023-24

ದಿನಾಂಕ: 07/08/2023

**ಚುನಾವಣೆ ಜರೂರು**

## ಸುತ್ತೋಲೆ

ವಿಷಯ: ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ – 2024 ರ ಸಂಬಂಧ ಯುವ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಅರಿವು ಮೂಡಿಸುವ ಬಗ್ಗೆ ಹಾಗೂ ಮನೆ ಮನೆ ಭೇಟಿ ಸಮೀಕ್ಷೆಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಬಗ್ಗೆ.

ಉಲ್ಲೇಖ: 1. ಮಾನ್ಯ ಭಾರತ ಚುನಾವಣಾ ಆಯೋಗ ರವರ ಪತ್ರದ ಸಂಖ್ಯೆ: 23/2023 ಐಎನ್ಎಸ್‌ಟಿ(ವಲ್ಯೂ-111) ದಿನಾಂಕ: 29/05/2023

2. ಮಾನ್ಯ ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ರವರ ಕಛೇರಿಯ ಪತ್ರದ ಸಂಖ್ಯೆ: ಡಿಪಿಎಆರ್:293:ಚುಮಪ:2023, ದಿನಾಂಕ: 06/06/2023

ಕುಲಸಚಿವರ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
1603
10/8/23
ಟಮಕ, ಕೋಲಾರ

***********

ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ – 2024ರ ಸಂಬಂಧ ಉಲ್ಲೇಖಿತ ಭಾರತ ಚುನಾವಣಾ ಆಯೋಗದ ಪತ್ರದ ನಿರ್ದೇಶನದಂತೆ ನಾಲ್ಕು ಅರ್ಹತಾ ದಿನಾಂಕಗಳಲ್ಲಿ ಅಂದರೆ (1ನೇ ಜನವರಿ, 1ನೇ ಏಪ್ರಿಲ್, 1ನೇ ಜುಲೈ ಹಾಗೂ 1ನೇ ಅಕ್ಟೋಬರ್) 17+ ವರ್ಷ ತುಂಬಿದವರನ್ನು ದಿನಾಂಕ: 01-01-2024ಕ್ಕೆ ನಿರೀಕ್ಷಿತ ಮತದಾರರೆಂದು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಬಹುತೇಕ 17+ ವರ್ಷದ ವಯಸ್ಸಿನವರು ಪದವಿ ಪೂರ್ವ ಕಾಲೇಜಿನ ಹಾಗೂ ಪದವಿ ಕಾಲೇಜಿನ ವಿದ್ಯಾರ್ಥಿಗಳಾಗಿವುದರಿಂದ, ಸದರಿ ವಿದ್ಯಾರ್ಥಿಗಳಿಗೆ ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವ ಕುರಿತು ಅರಿವು ಮೂಡಿಸುವುದರಿಂದ ಬಹಳಷ್ಟು ಅರ್ಹ ಯುವ ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಬೇಕಾಗಿರುತ್ತದೆ. ಆದ್ದರಿಂದ, ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜಿನ ಪ್ರಾಂಶುಪಾಲರುಗಳು ಅವರ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳನ್ನು ಮತದಾರರ ಪಟ್ಟಿಗೆ ವೋಟರ್ ಹೆಲ್ಪ್‌ಲೈನ್ ಆಪ್ ಮೂಲಕ ಸೇರ್ಪಡೆ ಮಾಡಿಕೊಳ್ಳುವಂತೆ ತಮ್ಮ ಪಾಠ ಪ್ರವಚನದ ಸಮಯದಲ್ಲಿ ಈ ಕುರಿತು ತಪ್ಪದೇ ಎಲ್ಲಾ 17+ ವಯಸ್ಸಿನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸತಕ್ಕದ್ದು ಹಾಗೂ ಈ ರೀತಿ ಅರಿವು ಮೂಡಿಸಿದ ಬಗ್ಗೆ ಅವರ ಕಾಲೇಜಿನಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಯಾದ ಯುವ ಮತದಾರರ ಪಟ್ಟಿಯನ್ನು ಮತ್ತು ಅನುಪಾಲನಾ ವರದಿಯನ್ನು ಈ ಕಛೇರಿಗೆ ಅತೀ ಜರೂರಾಗಿ ತಪ್ಪದೇ ಕಳುಹಿಸತಕ್ಕದ್ದು.

ಮುಂದುವರೆದಂತೆ, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ದಿನಾಂಕ: 01/08/2023 ರಿಂದ 21/08/2023 ರವರೆಗೆ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ – 2024ರ ಸಂಬಂಧ ಮನೆ ಮನೆ ಭೇಟಿ ಸಮೀಕ್ಷೆಯು ಕೈಗೊಳ್ಳುತ್ತಿರುವುದರಿಂದ ಸದರಿ ಮನೆ ಮನೆ ಭೇಟಿ ಸಮೀಕ್ಷೆಗೆ ಎಲ್ಲಾ ಮತಗಟ್ಟೆ ಹಂತದ ಅಧಿಕಾರಿಗಳು ಅವರ ಮತಗಟ್ಟೆ ವ್ಯಾಪ್ತಿಗೆ ಒಳಪಡುವ ಮತದಾರರ ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಬಿ.ಎಲ್.ಒ ರವರಿಗೆ ಸೂಕ್ತ ಮಾಹಿತಿಯನ್ನು ನೀಡಿ ಸಹಕರಿಸುವಂತೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸತಕ್ಕದ್ದು.

ಮನೆ ಮನೆ ಬೇಟಿ ಸಮೀಕ್ಷೆಯಲ್ಲಿ ನಿರತರಾದ ಜಿಲ್ಲೆಯ ಎಲ್ಲಾ ಮತಗಟ್ಟೆ ಹಂತದ ಅಧಿಕಾರಿಗಳು ಹಾಗೂ ಬಿ.ಎಲ್.ಒ ಮೇಲ್ವಿಚಾರಕರ ವಿವರಗಳನ್ನು ಈ ಜಿಲ್ಲೆಯ ಎನ್.ಐ.ಸಿ ವೆಬ್‌ಸೈಟ್‌ನಲ್ಲಿ https://kolar.nic.in/en/election/ ಲಭ್ಯವಿರುವ ಬಗ್ಗೆ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಿದೆ.

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ಚುನಾವಣಾಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ.

ಪ್ರತಿಯನ್ನು:

1. ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ ಕೋಲಾರ ರವರಿಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ಈ ಜಿಲ್ಲೆಯಲ್ಲಿ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಜಾರಿ ಮಾಡಲು ಕುರಿತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

Scanned by CamScanner

(58)



2. ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕೋಲಾರ ಉಪ- ವಿಭಾಗ, ಕೋಲಾರ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಉಪ-ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ ರವರಿಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ನಿಮ್ಮ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಪದವಿ ಪೂರ್ವ ಕಾಲೇಜುಗಳ ಪಾಂಶುಪಾಲರಿಗೆ ಜಾರಿ ಮಾಡಿ ಸದರಿ ಸುತ್ತೋಲೆಯಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಕ್ತ ನಿರ್ದೇಶನ ನೀಡತಕ್ಕದ್ದು ಹಾಗೂ ಈ ಕುರಿತು ಅನುಪಾಲನಾ ವರದಿಯನ್ನು ನಿಯಮಿತವಾಗಿ ಸಲ್ಲಿಸತಕ್ಕದ್ದು.
4. ಜಿಲ್ಲೆಯ ಎಲ್ಲಾ ಸಹಾಯಕ ಮತದಾರರ ನೋಂದಣಾಧಿಕಾರಿಗಳು ಹಾಗೂ ತಹಶೀಲ್ದಾರ್ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಈ ಸುತ್ತೋಲೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಜಾರಿ ಮಾಡಲು ಸೂಚಿಸಿದೆ.
5. ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಪದವಿ ಕಾಲೇಜುಗಳ ಪ್ರಾಂಶುಪಾಲರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ತಹಶೀಲ್ದಾರ್ ರವರ ಮೂಲಕ ಕಳುಹಿಸಿದೆ.
6. ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ತಹಶೀಲ್ದಾರ್ ರವರ ಮೂಲಕ ಕಳುಹಿಸಿದೆ.
7. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಕೋಲಾರ ಜಿಲ್ಲೆ ರವರ ಮಾಹಿತಿಗಾಗಿ ಕಳುಹಿಸುತ್ತಾ, ಸದರಿ ಸುತ್ತೋಲೆಯಲ್ಲಿನ ಮಾಹಿತಿಯನ್ನು ಸಾರ್ವಜನಿಕರು ಹಾಗೂ ಯುವ ಮತದಾರರ ಗಮನಕ್ಕಾಗಿ ನಿಮ್ಮ ವ್ಯಾಪ್ತಿಗೆ ಒಳಪಡುವ ದೈನಂದಿನ ದಿನಪತ್ರಿಕೆಗಳಲ್ಲಿ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಶುಲ್ಕರಹಿತವಾಗಿ ಸರ್ಕಾರಕ್ಕೆ ವೆಚ್ಚಬಾರದಂತೆ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಂಡು ಪ್ರಕಟಿತ ಪತ್ರಿಕಾ ತುಣುಕುಗಳನ್ನು ಈ ಕಛೇರಿಗೆ ದಾಖಲೆಗಾಗಿ ಸಲ್ಲಿಸುವಂತೆ ತಿಳಿಸಿದೆ.
8. ಕಛೇರಿ ಪ್ರತಿ.

Scanned by CamScanner